**ಸಾಕ್ಷಿಯನ್ನು ದಿಃ 14.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ನನ್ನ ಹೆಸರು ಅಜಿರುನ್ನಿತಾ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನದೆ ಸಹಿ ಇರುತ್ತದೆ. ನಮ್ಮ ಕುಟುಂಬದ ಸದಸ್ಯರೆಲ್ಲರೂ ಮೊಹಮ್ಮದಿಯನ್ಸ , ಹಿಂದುಗಳು ಯಾರು ಇರುವುದಿಲ್ಲ ಎಂದರೆ ಸರಿ. ಮೊಹಮ್ಮದಿಯನ್ ಅಲ್ಲಿ ಸುನ್ನಿ ಜನಾಂಗಕ್ಕೆ ಸೇರಿರುತ್ತೇವೆ. ನಾನು ಉಳಿದ ವಾದಿಗಳ ಪರವಾಗಿಯೂ ಸಾಕ್ಷಿ ನುಡಿಯುತ್ತಿದ್ದೇನೆ. ವಕೀಲರಿಗೆ ಮಾಹಿತಿ ಕೊಡಲು ನಾನು ಮತ್ತು ನನ್ನ ಅಕ್ಕನ ಮಗಳು ಹೋಗಿದ್ದೇವು. ಹಾಗೆ ಮಾಹಿತಿ ಕೊಡುವ ಕಾಲಕ್ಕೆ ನಾವು ಯಾವ ಪಂಗಡಕ್ಕೆ ಸೇರಿದವರು ಎಂದು ಮಾಹಿತಿಯನ್ನು ನೀಡಿರುತ್ತೇವೆ. ಪ್ರಕರಣ ದಾಖಲು ಮಾಡುವ ಕಾಲಕ್ಕೆ ಪಾರ್ಟಿಶನ್ ಡೀಡ್ ಆಗಿರುವ ದಾಖಲೆ, ಆರ್.ಟಿ.ಸಿ ಮತ್ತು ಮ್ಯೂಟೇಶನ್ ಕೊಟ್ಟಿರುತ್ತೇನೆ. ನಾವು ಮೊಹಮ್ಮದ್ ಯಾಸೀನ್ ರವರ ಕುಟುಂಬಕ್ಕೆ ಸೇರಿದ ವಂಶಸ್ಥರು ಎಂದು ತೋರಿಸಲು ವಕೀಲರ ಬಳಿ ದಾಖಲೆ ಕೊಟ್ಟಿರುತ್ತೇನೆ. ತಾಲ್ಲೂಕು ಕಛೇರಿಯಿಂದ ತೆಗೆದುಕೊಟ್ಟ ವಂಶವೃಕ್ಷ ಕೊಟ್ಟಿರುತ್ತೇನೆ. ನಾವು ಖಾಜೀಮ್ ಮೊಹಮ್ಮದ್ ಯಾಸೀನ್ ರವರ ಕುಟುಬಂಬಸ್ಥರ 3 ಮತ್ತು 4 ಪ್ರತಿವಾದಿಗೆ ಗೊತ್ತಿಲ್ಲ ಎಂದರೆ ಸರಿ.

ನಾನು ಹಾಜರು ಪಡಿಸಿರುವಂತಹ ಎ.ಸಿ ಕೋರ್ಟ ಆದೇಶದಲ್ಲಿ ಐಟಂ ನಂ. 1 ರ 5 ಎಕರೆ 14 ಗುಂಟೆ ಜಮೀನು ನಮೂದು ಇಲ್ಲ ಎಂದರೆ ಸರಿ. ಆಗ ಅದನ್ನು ಮಾರಾಟ ಮಾಡಿರಲಿಲ್ಲ ವೆನ್ನುತ್ತಾರೆ. ಸದರಿ ಸ್ವತ್ತನ್ನು ಸರ್ವೆ ನಂ. 2 ರಲ್ಲಿ 5 ಎಕರೆ 14 ಗುಂಟೆ ನನ್ನ ಅಣ್ಣ ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಾರಾಟ ಮಾಡಿದ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ಮಾರಾಟ ಮಾಡಿರುವ ವಿಚಾರ 1 ವರ್ಷದ ನಂತರ ಗೊತ್ತಾಯಿತು ಎಂದು

ಹೇಳಿರುತ್ತೇವೆ. ಹಾಗೆ ಮಾರಾಟ ಮಾಡಿದ್ದು ಹಾಗೂ ಖಾತೆ ಬದಲಾವಣೆ ಆಗಿದ್ದು ಸರಿ ಇಲ್ಲ ಎಂದು ಎ.ಸಿ ಕೋರ್ಟನಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನಿಪಿ. 2 ರ ನತೆ ಆದೇಶ ಆಗಿದ್ದು, ದಿಃ 11.07.2018 ರಂದು ಎಂದರೆ ಸರಿ. ನಿಪಿ. 2 ರಂತೆ ಎ.ಸಿ ಕೋರ್ಟನಲ್ಲಿ ಯಾರ ಯಾರ ಮೇಲೆ ಯಾವ ಉದ್ದೇಶಕ್ಕಾಗಿ ಕೇಸ್ ಹಾಕಲಾಗಿತ್ತು ಎಂದರೆ ಅಣ್ಣಂದಿರ ಮೇಲೆ ಆಸ್ತಿ ಬರಬೇಕಿತ್ತು ಎಂದು ಹಾಕಿದ್ದಾರೆ.

1 ನೇ ಐಟಂ ಸ್ವತ್ತನ್ನು ನನ್ನ ಅಣ್ಣ 3 ಮತ್ತು 4 ನೇ ಪ್ರತಿವಾದಿಯವರಿಗೆ ದಿಃ 23.07.2016 ರಂದು ಮಾರಾಟ ಮಾಡಿದ್ದರು ಎಂದರೆ ಸರಿ. ನಿಪಿ. 2 ರಂತೆ ಆದೇಶ ಹೊರಡಿಸುವವರೆಗೂ ಸದರಿ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರಲಿಲ್ಲ. ಹಾಗೆ ನನ್ನ ಅಣ್ಣ 3 ಮತ್ತು 4 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿರುವುದು ನಮಗೆ ಒಪ್ಪಿಗೆ ಇದೆ ಎಂದರೆ ಸರಿಯಲ್ಲ. ಹಾಗೆ ಒಪ್ಪಿಗೆ ಇರುವ ಕಾರಣ ಎ.ಸಿ ಕೋರ್ಟನಲ್ಲಿ ಆ ಬಗ್ಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿ ಆಗ ಮಾರಾಟ ಮಾಡಿರಲಿಲ್ಲ ಈಗ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಹಾಗೆ ಮಾರಾಟ ಮಾಡಿರುವ ಕ್ರಯ ಪತ್ರ ನಮಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ ಹಾಗೆ ಪರಿಹಾರ ಪಡೆಯಲು ವಕೀಲರಿಗೆ ತಿಳಿಸಿರುತ್ತೇನೆ.

1 ನೇ ಐಟಂ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ,ಪಶ್ಚಿಮಕ್ಕೆ ಉತ್ತರಕ್ಕೆ ದಕ್ಷಿಣಕ್ಕೆ ಏನೀದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 2 ರ ಮೂಲ ದಾಖಲೆ ನೋಡಿದ್ದೇನೆ. ಸದರಿ ಸರ್ವೆ ನಂ. ಆರ್.ಟಿ.ಸಿ ಮೊದಲು ಮೃತ 1 ನೇ ಪ್ರತಿವಾದಿ ಮೊಹಮ್ಮದ್ ಅಜೀರುಲ್ಲಾ ರವರ ಹೆಸರಿಗೆ ಯಾವ ಅಧಾರದಲ್ಲಿ ಖಾತೆ ಆಗಿತ್ತು ಎಂದು ನಾನು ನೋಡಿಲ್ಲ. 1 ನೇ ಐಟಂ ಸ್ವತ್ತು ಅವರ ಹೆಸರಿನಲ್ಲಿ ಇದ್ದ ಆರ್.ಟಿ.ಸಿ ನೋಡಿದ್ದಿರಾ ಎಂದರೆ ಸಾಕ್ಷಿ ಅದನ್ನು ನೋಡಿಲ್ಲ ಜಂಟಿ ಇದ್ದ ಬಗ್ಗೆ ನೋಡಿದ್ದೇನೆ. 30-33 ವರ್ಷದಿಂದ ಹಾಗೆ ಜಂಟಿ ಹೆಸರಿನಲ್ಲಿ ಇದ್ದ ಆರ್.ಟಿ.ಸಿ ನೋಡಿದ್ದೇನೆ. ಅಂತಹ ಆರ್.ಟಿ.ಸಿಯನ್ನು

ವಕೀಲರಿಗೆ ಕೊಟ್ಟಿದ್ದೇನೆ. ಐಟಂ ನಂ. 1 ರ ಸ್ವತ್ತಿಗೆ ಯಾವತ್ತಿಗೆ ಜಂಟಿ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಈ ಸ್ವತ್ತಿನ ಆರ್.ಟಿ.ಸಿ ಮೊಹಮ್ಮದ್ ಅಜೀರುಲ್ಲಾ ರವರ ಒಬ್ಬರ ಹೆಸರಿನಲ್ಲಿ ಮಾತ್ರ ಬರುತ್ತಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲದೆ ಹಾಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಗೊತ್ತಿಲ್ಲದ ಹಾಗೆ ಹಾಗೆ ಆರ್.ಟಿ.ಸಿ ಮಾಡಿಕೊಂಡಿದ್ದ ಬಗ್ಗೆ ಕೇಸು ಹಾಕಿದ ವಿಚಾರ ನಮ್ಮ ವಕೀಲರಿಗೆ ಹೇಳಿರುತ್ತೇನೆ. ಯಾವ ವರ್ಷದಿಂದ ಮೊಹಮ್ಮದ್ ಅಜೀರುಲ್ಲಾ ರವರ ಒಬ್ಬರ ಹೆಸರಿನಲ್ಲಿ ಆರ್.ಟಿ.ಸಿ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ.ಆರ್.ಟಿ.ಸಿಯಲ್ಲಿ ಮೃತ 1 ನೇ ಪ್ರತಿವಾದಿ ಹೆಸರಿನಲ್ಲಿ ಭೋಗ್ಯ ಇರುವುದು ನನಗೆ ಗೊತ್ತಿಲ್ಲ. ಅಗ ಭೋಗ್ಯ ಇರುವುದು ಸರಿ ಇಲ್ಲ ಎಂದು ತಹಶೀಲ್ದಾರ್ ಕಛೇರಿಯಲ್ಲಿ ಕೇಸ್ ದಾಖಲು ಮಾಡಿರುವುದು ನನಗೆ ಗೊತ್ತಿಲ್ಲ. 92/10-11 ಎಂದು ಪ್ರಕರಣ ದಾಖಲು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

ಸದರಿ ಪ್ರಕರಣ ದಾಖಲು ಆದ ಬಳಿಕ ಭೋಗ್ಯ ಮಾಡಿರುವುದು ಸರಿ ಅಲ್ಲ ಎಂದು ಹಕ್ಕು ಬದಲಾವಣೆ ಎಂದು ಆದೇಶ ಮಾಡಿರುವುದು ನನಗೆ ಗೊತ್ತಿಲ್ಲ. ಹಾಗೆ 1 ನೇ ಐಟಂ ಸ್ವತ್ತಿಗೆ ಮೃತ 1 ನೇ ಪ್ರತಿವಾದಿ ಹೆಸರಿನಲ್ಲಿ ಆರ್.ಟಿ.ಸಿ ಇದ್ದದ್ದು ಕ್ರಮಬದ್ಧ ವಾಗಿ ಇದೆ ಎಂದು ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಅವರು ಮಾರಾಟ ಮಾಡುವ ತನಕ 1 ನೇ ಪ್ರತಿವಾದಿ ಹೆಸರಿನಲ್ಲಿ ಆರ್.ಟಿ.ಸಿ ಮತ್ತು ಖಾತೆ ಇತ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹೆಸರಿನಲ್ಲಿ ಸದರಿ ಸ್ವತ್ತಿಗೆ ಕಾನೂನು ಭಾಹಿರವಾಗಿ ಖಾತೆ ಆಗಿದೆ ಎಂದು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. 1 ನೇ ಐಟಂ ಸ್ವತ್ತನ್ನು ಮೃತ 1 ನೇ ಪ್ರತಿವಾದಿ ತಾನು ಬದುಕಿರುವಾಗಲೇ ಮಾರಾಟ ಮಾಡುವ ವರೆಗೆ ಕಾನೂನು ಬದ್ಧ ಮಾಲೀಕತ್ವ ಹೊಂದಿ ಸ್ವಾಧೀನದಲ್ಲಿ ಇದ್ದು ಅನುಭವಿಸಿಕೊಂಡು ಬಂದಿದ್ದರು ಎಂದರೆ ಅದು ಗೊತ್ತಿಲ್ಲ ಅದು ಜಂಟಿಯಲ್ಲಿ ಇದ್ದದ್ದು ಗೊತ್ತು. 1 ನೇ ಐಟಂ ಸ್ವತ್ತಿಗೆ ಮಾಲೀಕತ್ವ ಹೊಂದಿದ್ದ ಕಾರಣ

ಅದನ್ನು ಯಾರಿಗಾದರೂ ಪರಭಾರೆ ಮಾಡುವ ಹಕ್ಕು 1 ನೇ ಪ್ರತಿವಾದಿ ಹೊಂದಿದ್ದರು ಎಂದರೆ ಸರಿಯಲ್ಲ.

ದಿಃ 23.07.2016 ರ ಕರಯ ಪತ್ರವನ್ನು ನಾನು ಖುದ್ದಾಗಿ ನೋಡಿರುತ್ತೇನೆ. ಅದರಲ್ಲಿ ಯಾವ ಉದ್ದೇಶಕ್ಕಾಗಿ 3 ಮತ್ತು 4 ನೇ ಪ್ರತಿವಾದಿ ಯವರಿಗೆ ಮಾರಾಟ ಮಾಡಿದ್ದರು ಎಂಬ ವಿಷಯ ಅದರಲ್ಲಿ ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಐಟಂ ಸ್ವತ್ತು ಮೃತ 1 ನೇ ಪ್ರತಿವಾದಿಯ ಮಾಲೀತ್ವಕ್ಕೆ ಹೇಗೆ ಬಂದಿತ್ತು ಎಂದು ನಿಪಿ. 3 ರ ಕ್ರಯ ಪತ್ರದಲ್ಲಿ ಬರೆದಿರುವ ವಿಚಾರ ನಾನು ಓದಿ ನೋಡಿಲ್ಲ. ನಿಪಿ. 3 ರ ಪ್ರಕಾರ ಎಷ್ಟು ಹಣಕ್ಕೆ ಮೃತ 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೃತ 1 ನೇ ಪ್ರತಿವಾದಿ ಮಾರಾಟ ಮಾಡುವ ಪೂರ್ವದಲ್ಲಿ ಮಾರಾಟ ಮಾಡುವ ಬಗ್ಗೆ ಪ್ರಚಾರ ಪಡಿಸಿರುವ ವಿಚಾರ ನನಗೆ ಗೊತ್ತಿಲ್ಲ. ಅದಾದ ನಂತರ ಸಾಕಷ್ಟು ಜನರು ಅದನ್ನು ಖರೀದಿ ಮಾಡಲು ಆಸಕ್ತಿ ಹೊಂದಿ ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೆ ಸಾರ್ವಜನಿಕರು ಬಂದು ಹೋಗುತ್ತಿದ್ದ ಬಗ್ಗೆ ನಾವು ತಕರಾರು ಮಾಡಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಾಗೆ ಬಂದ ಸಾರ್ವಜನಿಕರಲ್ಲಿ 3 ಮತ್ತು 4 ನೇ ಪ್ರತಿವಾದಿಗಳು ಸ್ವತ್ತಿನ ಸ್ಥಳಕ್ಕೆ ಬಂದಿದ್ದರು ಎಂದರೆ ಆ ಬಗ್ಗೆ ಕೇಳಿಲ್ಲ ಎನ್ನುತ್ತಾರೆ. 3 ಮತ್ತು 4 ನೇ ಪ್ರತಿವಾದಿಗಳು 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರಲ್ಲದೆ ಅಲ್ಲದೆ ಅಕ್ಕ ಪಕ್ಕದ ಜನರನ್ನು ಹಲವಾರು ಬಾರಿ ವಿಚಾರಿಸಿರುತ್ತಾರೆ ಎಂಬ ವಿಷಯ ನನಗೆ ಗೊತ್ತಿಲ್ಲ. ಹಾಗೆ ವಿಚಾರಿಸಿದ್ದಲ್ಲದೆ 3 ಮತ್ತು 4 ನೇ ಪ್ರತಿವಾದಿಯರು ಖರೀದಿ ಪೂರ್ವದಲ್ಲಿ ಸ್ವತ್ತಿನ ಅಳತೆ ಕೂಡ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ವಿಚಾರವಾಗಿ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಮತ್ತು 3 ಮತ್ತು 4 ನೇ ಪ್ರತಿವಾದಿಗಳ ನಡುವೆ ಸುಮಾರು 6 ತಿಂಗಳ ಕಾಲ ಮಾತುಕತೆ ನಡೆದಿರುತ್ತದೆ.

ನಂತರ ದಿಃ 24.03.2016 ರಂದು 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು, 3 ಮತ್ತು 4 ನೇ ಪ್ರತಿವಾದಿ ನಿಪಿ. 3 ರಂತೆ ನೊಂದಣಿ ಕ್ರಯಪತ್ರ ಮಾಡಿಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಮಾರಾಟ ಮಾಡಿದ ದಿನದಂದೆ 1 ನೇ ಐಟಂ ಸ್ವತ್ತರ ಸ್ವಾಧೀನವನ್ನು 3 ಮತ್ತು 4 ನೇ ಪ್ರತಿವಾದಿಯರಿಗೆ ಕೊಟ್ಟಿದ್ದರು ಎಂದರೆ ಸರಿ, ಅದರೆ ನಾವು ಅನುಮತಿ ಕೊಟ್ಟಿಲ್ಲವೆನ್ನುತ್ತಾರೆ. ನಿಪಿ. 3 ರ ಕ್ರಯಪತ್ರದಂತೆ 3 ಮತ್ತು 4 ನೇ ಪ್ರತಿವಾದಿಯರು ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಕೊಟ್ಟು ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎಂದರೆ ನಮಗೆ ಗೊತಿತಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2016 ನೇ ಸಾಲಿನಿಂದಲೂ ಖಾತೆ ಬದಲಾವಣೆ ಆಗಿ 3 ಮತ್ತು 4 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿ ಆರ್.ಟಿ.ಸಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಾವು ದಾವೆ ಸಲ್ಲಿಸಿರುವುದು 2022 ನೇ ಸಾಲಿನಲ್ಲಿ ಎಂದರೆ ಸರಿ. ದಾವೆ ಸಲ್ಲಿಸುವ ಪೂರ್ವದಲ್ಲಿ 1 ನೇ ಐಟಂ ಸ್ವತ್ತಿನ ಬಳಿ ಹೋಗಿ ನೋಡಿರುತ್ತೇನೆ.

ದಾವೆ ಸಲ್ಲಿಸುವ 1 ವರ್ಷ ಪೂರ್ವದಲ್ಲಿ 1 ನೇ ಐಟಂ ಸ್ವತ್ತಿನ ಬಳಿ ಹೋಗಿದ್ದೆ. ಆಗ ಸದರಿ ಸ್ವತ್ತಿನಲ್ಲಿ ಮೆಕ್ಕೆಜೋಳ,10-15 ತೆಂಗಿನ ಮರ, ಮತ್ತು ಒಂದು ಶೀಟಿನ ಮನೆ, ಬೋರ್ ವೆಲ್ ಮತ್ತು ಗಿಡ ಮರಗಳು ಇದ್ದವು. ಹಾಗೆ ನೋಡಿದಾಗ ತಂಗಿನ ಮರ 10 ರಿಂದ 20 ವರ್ಷದ್ದು ಇತ್ತು. ವಕೀಲರಲ್ಲಿ ಮಾಹಿತಿ ಕೊಡುವ ಕಾಲಕ್ಕೆ ಸದರಿ 1 ನೇ ಐಟಂ ಸ್ವತ್ತು ಗದ್ದೆ ಎಂದು ಹೇಳಿರುತ್ತೇನೆ ಹೊಲ ಎಂದು ಹೇಳಿರುವುದಿಲ್ಲ. 2016 ರಲ್ಲಿ ಸ್ವಾಧೀನ ತೆಗೆದುಕೊಂಡ ನಂತರ 3 ಮತ್ತು 4 ನೇ ಪ್ರತಿವಾದಿಗಳು ಬೋರ್ ತೆಗೆಸಿದ್ದರು ಎಂದರೆ ಸರಿ. ಹಾಗೆ ಬೋರ್ ತೆಗೆಸಿ ಹೊಲವನ್ನು ನೀರಾವರಿ ಜಮೀನಾಗಿ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿ. 1 ನೇ ಐಟಂ ಸ್ವತ್ತು ತೆಂಗಿನ ಗಿಡಗಳನ್ನು ಹಾಕಿ ಅದು ಅಭಿವೃದ್ದಿ ಹೊಂದಿದೆ ಎಂದರೆ ಸರಿ. ದಾವೆ ಸಲ್ಲಿಸುವ ಕಾಲಕ್ಕೆ ಸದರಿ ಸ್ವತ್ತು ಗಾರ್ಡನ್ ಲ್ಯಾಂಡ್

ಆಗಿತ್ತು ಎಂದರೆ ಗದ್ದೆ ಇತ್ತು ಎನ್ನುತ್ತಾರೆ. ಗಾರ್ಡನ್ ಲ್ಯಾಂಡ್ ಅಗಿ ಚೆನ್ನಾಗಿ ಅಭಿವೃದ್ಧಿ ಹೊಂದಿದ ಹಾಗೆ ಕಂಡ ಕಾರಣ ಕೇಸು ಹಾಕಲಾಗಿದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಸ್ಥಿತಿಯನ್ನು ಪೋಟೊದಲ್ಲಿ ನೋಡಿದರೆ ಗುರುತಿಸುತ್ತೇನೆ. 3 ಮತ್ತು 4 ನೇ ಪ್ರತಿವಾದಿಗಳಿಗೆ ಈ ದಾವೆ ಹಾಕುವ ಪೂರ್ವದಲ್ಲಿ ಅವರು ಯಾರೆಂದು ಗೊತ್ತಿಲ್ಲ. ನ್ಯಾಯಾಲಯದಿಂದ ಸಮನ್ಸ ಹೋದ ನಂತರ ವಾದಿಗಳು ಯಾರು ಎಂದು 3 ಮತ್ತು 4 ನೇ ಪ್ರತಿವಾದಿ ತಿಳಿದುಕೊಳ್ಳಲು ಪ್ರಯತ್ನಿಸಿದರು ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯವರು 20 ಲಕ್ಷ ರೂ. ಗಳಿಗೆ 1 ನೇ ಐಟಂ ಸ್ವತ್ತನ್ನು ಯಾರಿಂದಲ್ಲೂ ತಕರಾರು ಇಲ್ಲದೆ ಬೊನಾಫೈಡ್ ಪರ್ಚೆಜರ್ ಆಗಿ ಮೃತ 1 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದರು ಎಂದರೆ ಮಾರಿರುವ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.